ಎನ್. ವಸಂತಾ, ಬೆಂಗಳೂರು
*ಮಠಾಧೀಶರ ಹೆಸರಿನ ಮುಂದೆ ಶ್ರೀ ಶ್ರೀ ಶ್ರೀ ಸೇರಿಸುವುದೇಕೆ ಅಣ್ಣ ಯ್ಯಾ?*




ಪೀಠ ಏರುತ್ತಿದ್ದಂತೆಯೇ ಶ್ರೀ ಉರುಫ್ ಸಿರಿ, ಸಂಪತ್ತು, ಐಶ್ವರ್ಯಗಳು ಸೇರುವುದರಿಂದ!

ನರಸಿಂಹ ಎಂ. ಪೈ, ಕಾಸರಕೋಡ
*ಮ್ಯಾಜಿಕ್‌ಗೂ, ಮ್ಯೂಸಿಕ್‌ಗೂ ಏನು ವ್ಯತ್ಯಾಸ?*
ಲಯ ಹಿಡಿದರೆ ಮ್ಯೂಸಿಕ್, ಲಯ ಮಾಡಿದರೆ ಮ್ಯಾಜಿಕ್!

ದೇಶವಳ್ಳಿ ಶಿವು, ಸಂತೇಮರಹಳ್ಳಿ
*ಕಾಡ್ಗಿಚ್ಚು ಆರಿಸೋಕೆ ಅಗ್ನಿಶಾಮಕದಳ ಇದೆ, ಆದರೆ ಹೊಟ್ಟೆಕಿಚ್ಚು ಆರಿಸೋಕೆ...?*
ಬಿಪಿ ಮಾತ್ರೆ, ಜೆಲೋಸಿಲ್!

ಎ.ಎಸ್. ಸ್ವಾಮಿ, ಶೋರಾಪೂರ
*ಪ್ರಕೃತಿಯಿಂದ ನಾವು ಕಲಿಯಬೇಕಾದ ನೀತಿಪಾಠವೇನು?*
ಕೊಲೆಯಾದರೂ ತೊಲೆಯಾಗಿ ಮರ ಅಮರ!

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
*ಸಿಗರೇಟ್ ಕಂಪನಿಯಿಂದ ಕ್ಯಾನ್ಸರ್ ಆಸ್ಪತ್ರೆಗೆ ಧನಸಹಾಯ ಎಂತಹ ವಿಪರ್ಯಾಸ!?*
ಕಂಪನಿಯ ರೀತಿಯೇ ಹಾಗೆ – ಶ್ರೀಮಂತವಾದ ಪ್ಯಾಕ್‌ನಲ್ಲಿ ಕ್ಯಾನ್ಸರ್‌ನ ತುಂಡುಗಳು!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ಹೆಂಡತಿ ಪ್ರತಿದಿನ ನಗುನಗುತ್ತಾ ಇರಬೇಕಾದರೆ ಏನು ಮಾಡಬೇಕು?*



ಕುಳಿತುಕೊಳ್ಳುವ, ನಡೆದಾಡುವ ಜಾಗಗಳಲ್ಲೆಲ್ಲಾ ಕನ್ನಡಿ ಹಾಕಿಬಿಡಿ!

ಎಚ್. ಆನಂದ್ ಕುಮಾರ್, ಚಿತ್ರದುರ್ಗ
*ರಾಮ್, ನಿಮ್ಮ ಉತ್ತರಗಳಲ್ಲಿ ಬರೀ ಹಾಟ್; ಕೋಲ್ಡ್ ಯಾಕಿಲ್ಲ?*
ಉತ್ತರ ಪಡೆದವರಿಗೆ ನೆಗಡಿ ಆಗದಿರಲೆಂದು!

ಎನ್.ಎಸ್. ಆನಂದ್, ಕತ್ರಗುಪ್ಪ
*ಹುಡುಗಿ ಬಗ್ಗೆ ತಲೆ ಕೆಡಿಸಿಕೊಳ್ಳುವ ಬ್ರಹ್ಮಚಾರಿಗೂ, ಸತ್ತ ಹೆಂಡತಿಯನ್ನು ಜ್ಞಾಪಿಸಿಕೊಳ್ಳುವ ವಿಧುರನಿಗೂ ಏನು ವ್ಯತ್ಯಾಸ?*
ಹೀಗೆ ಹೋಲಿಸಿ ನೋಡಿ – ಸರ್ಕಾರ ಹೆಣ್ಣು, ಪರಿತಪಿಸುವ ಬ್ರಹ್ಮಚಾರಿ ದೊಡ್ಡಗೌಡರು, ವಿಧುರ ಎಡ್ಡಿ!

ವಿಜಯ್ ನರಹರಿ, ಆಸುಂಡಿ
*ಪಾಪಿ ಸಮುದ್ರಕ್ಕೆ ಹೋದರೂ ಮೊಣಕಾಲುದ್ದ ನೀರಂತೆ ಎಂಬ ಗಾದೆಗೆ ಒಂದು ಉದಾಹರಣೆ ಕೊಡಿ ಗುರುವೆ?*
ನಗೋ ಮುಖ್ಯಮಂತ್ರಿ ಬಂದ್ರೂ ಪೆಟ್ರೋಲ್ ಬೆಲೆ ಮೇಲೇ!

ಸಿ.ಎನ್.ವಿಜಯಲಕ್ಷ್ಮಿ, ಶಿವಮೊಗ್ಗ
*ಪುರಾಣಗಳಲ್ಲಿ ಮತ್ತು ಹಿಂದಿನ ಕಾಲದಲ್ಲಿ ಇಲ್ಲದಿದ್ದ ವಿಚ್ಛೇದನಗಳು ಈಗ ಬಹಳ ಹೆಚ್ಚಾಗಿದೆಯಲ್ಲಾ?*
ಆಗಲೇ ಇದ್ದವಲ್ಲಾ... ಸೀತೆ ರಾಮನನ್ನು ತೊರೆದದ್ದು, ವಿಶ್ವಾಮಿತ್ರ ಮೇನಕೆಯನ್ನು ತೊರೆದದ್ದು... ಕೋರ್ಟ್ ಇಲ್ಲದಿದ್ದುದರಿಂದ ಡೈವೋರ್ಸ್ ಎಂದು ಕರೆಯಲಿಲ್ಲ ಅಷ್ಟೆ!

ವಿ.ಎಸ್. ಹಿಂದೂಪುರ, ಬಳ್ಳಾರಿ
*ಒಂದು ವೇಳೆ ಸಾವು ಇಲ್ಲದೆಹೋಗಿದ್ದರೆ ನಮ್ಮ ದೇಶದ ಜನಸಂಖ್ಯೆ ಎಷ್ಟಾಗುತ್ತಿತ್ತು?*
ಈಸ್ಟ್ ಇಂಡಿಯಾ ಕಂಪನಿಯವರು ಕಂಡ ತಕ್ಷಣ ಓಡಿಹೋಗಿಬಿಡುವಷ್ಟು!

ಕಾಳೀಹುಂಡಿ ಕೆ.ವಿ. ಶಿವಕುಮಾರ್, ಮೈಸೂರು
*ನಮ್ಮ ಬೆನ್ನ ಹಿಂದೆ ಭರವಸೆ ತುಂಬುವವರೇ ಇಲ್ಲವಲ್ಲಾ...?*
ಚುನಾವಣಾ ಸಮಯದವರೆಗೆ ಕಾಯಿರಿ. ಬೆನ್ನು ಬಾಗುವಷ್ಟು ಭರವಸೆಗಳು ದೊರೆಯುತ್ತವೆ!

ಎಂ.ಬಿ. ರಂಗಪ್ಪಶೆಟ್ಟಿ, ಮೋಕ
*ಹಿಂದೆ ಅನೇಕ ಯತಿಗಳು, ಸ್ವಾಮಿಗಳು ಜೀವಂತವಾಗಿ ಸಮಾಧಿಗ್ರಸ್ಥರಾದರು. ಈಗಿನವರು ಏಕೆ ಹಾಗಾಗಬಾರದು?*
ಸೂಯಿಸೈಡ್ ಅಟೆಂಪ್ಟ್ ಎಂದು ಕೇಸ್ ದಾಖಲಾಗುವುದರಿಂದ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಮೊದಲನೆಯ ಹೆಂಡತಿ ಚೆಕ್ ಇದ್ದಹಾಗೆ, ಎರಡನೆಯವಳು ಡಿಮಾಂಡ್ ಡ್ರಾಫ್ಟ್, ಮೂರನೆಯವಳು?*
ಮತ್ತೆ ಮತ್ತೆ ಇಂಟರೆಸ್ಟ್ ಹುಟ್ಟಿಸುವ ಓಡಿ (OD)!

## ಬಹುಮಾನಿತ ಪ್ರಶ್ನೆ

ಅರಕೆರೆ ಪಿ. ಸುರೇಶ್, ಭದ್ರಾವತಿ
*ಹೆಂಗಸರು ಗಂಡಸರ ಮೀಸೆಯ ಮೇಲೆ ಕಣ್ಣು ಹಾಕುತ್ತಾರಲ್ಲಾ, ಏಕೆ?*
ಹಿಡಿದು ಜಗ್ಗಲು ಕೈಗೆ ಸಿಗುವುದೇ ಎಂದು ಅಂದಾಜು ಮಾಡಲು!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಕಾನೂನಿಗಿಂತ ಮಿಗಿಲಾದದ್ದು?*
ಲೂಪ್‌ಹೋಲ್‌ಗಳು ಎಂದಿತೊಂದು ಕೋರ್ಟ್ ಪಕ್ಷಿ!

ಓಂಕುಮಾರ್ ಬಿ. ಸ್ವಾಮಿ, ಬೀದರ್
*ನಮ್ಮ ದೇಶದಲ್ಲಿ ಭ್ರಷ್ಟಾಚಾರ ಏಕೆ ತೊಲಗುವುದಿಲ್ಲ ಹೇಳ್ತೀರಾ ಸ್ವಾಮಿಗಳೆ?*
ನೈವೇದ್ಯ ಕೊಡುವ ಪದ್ಧತಿ ಇರುವುದರಿಂದ! ಮುಖಕ್ಕೆ ಮಂಗಳಾರತಿ ಎತ್ತುವುದನ್ನು ಹೆಚ್ಚಾಗಿಸಿದರೆ ಭ್ರಷ್ಟಾಚಾರ ತೊಲಗೀತು!

ಬಿ.ಎಸ್. ನಾರಾಯಣಸ್ವಾಮಿ, ಬೋಧನಹೊಸಹಳ್ಳಿ
ನಗುವವರಿಗೂ, ನಗದವರಿಗೂ ಏನಣ್ಣಾ ವ್ಯತ್ಯಾಸ?



ನಗುವವರು ಜಾಹಿರಾತುಗಳಲ್ಲಿ ಕಾಣಿಸಿಕೊಳ್ಳುತ್ತಾರೆ, ನಗದವರು ಗೋಳು ಸೀರಿಯಲ್‌ಗಳಲ್ಲಿ ಪಾತ್ರ ವಹಿಸುತ್ತಾರೆ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಮನುಷ್ಯ ಬರುವಾಗ ಒಂಟಿ, ಹೋಗುವಾಗ ಒಂಟಿ, ಇವುಗಳ ನಡುವೆ?*
ಆಗಾಗ್ಗೆ ಬೈಟೂ ಟೀ!

ಮಾಲತಿ ರಾಜು, ಬೆಂಗಳೂರು
*ಪ್ರತಿಪುರುಷನ ಯಶಸ್ಸಿನ ಹಿಂದೆ ಮಹಿಳೆ ಇರುತ್ತಾಳಂತೆ, ಮಹಿಳೆಯ ಯಶಸ್ಸಿನ ಹಿಂದೆ?*
ಯಶಸ್ಸು, ಪದವೂ ಬೇಡ, ಮಹಿಳೆ ಎಂದರೆ ಸಾಕು, ಹಿಂದೆ ಬೀಳಲು ಬೇಕಾದಷ್ಟು ಗಂಡುಗಳಿವೆ!

■ ರಾಮ್